**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ. 62/2023**

ಫಿರ್ಯಾದುದಾರರು:		ಶ್ರೀ ನಿರ್ವಾನಿ ಬಿನ್ ಮಲ್ಲಪ್ಪ ಕತ್ತಿ,

- ವಿರುದ್ದ -

ಆರೋಪಿ:		ಶ್ರೀಮತಿ ಶಂಕ್ರವ್ವ ಬಿನ್ ಶಿವರಾಯಪ್ಪ ಹುಜರಟ್ಟಿ,

**ದಂಡ ಪ್ರಕ್ರಿಯೆ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿತರ ಹೇಳಿಕೆ**

ಪ್ರಶ್ನೆ 1. ಫಿರ್ಯಾದುದಾರರ ಪರ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ:

ಪ್ರಶ್ನೆ 2. ಫ್ರಾಸಾ.1/ಶ್ರೀ ನಿರ್ವಾನಿ ಬಿನ್ ಮಲ್ಲಪ್ಪ ಕತ್ತಿ, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಒಳ್ಳೆಯ ಸ್ನೇಹಿತರಾಗಿರುತ್ತೀರಿ. ಹೀಗಿರುವಾಗ ಆರೋಪಿಯಾದ ನೀವು ನಿಮಗೆ ಸಾಲವನ್ನು ತೀರಿಸುವ ಸಲುವಾಗಿ ಮತ್ತು ವೈಯಕ್ತಿಕ ಹೊಣೆಗಾರಿಕೆಗಳನ್ನು ನಿರ್ವಹಣೆ ಮಾಡುವುದರ ಸಲುವಾಗಿ ಆಗಸ್ಟ್ -2021 ರಂದು ಫಿರ್ಯಾದುದಾರರಿಗೆ ರೂ.6,00,000/-ಗಳ ಕೈಗಡ ಸಾಲವನ್ನು ಕೇಳಿದ್ದು, ಅದಕ್ಕೆ ಫಿರ್ಯಾದುದಾರರು ರೂ.6,00,000/-ಗಳನ್ನು ತನ್ನ ವೈಯಕ್ತಿಕ ಉಳಿತಾಯದ ಹಣದಿಂದ ಆರೋಪಿಯಾದ ನಿಮಗೆ ನೀಡಿರುತ್ತಾರೆ. ಆರೋಪಿಯಾದ ನೀವು ಸದರಿ ಹಣವನ್ನು 3-4 ತಿಂಗಳ ಒಳಗಾಗಿ ಮರುಳಿ ಕೊಡುತ್ತೇನೆಂದು ಹೇಳಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ 3. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 3-4 ತಿಂಗಳು ಮುಗಿದಾದ ನಂತರ ನವೆಂಬರ್ ತಿಂಗಳಿನಲ್ಲಿ ಆರೋಪಿಯಾದ ನೀವು ದಿ: 29-11-2022 ರಂದು ನಿಮ್ಮ ಖಾತೆಯಿರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಶಾಖೆ: ಹೂಲಿಕಟ್ಟಿ ಇಲ್ಲಿಗೆ ಸೇರಿದ ಚೆಕ್ ನಂ.003307 ನ್ನು ರೂ.6,00,000/- ಈ ಸಾಕ್ಷಿದಾರರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ 4. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದಂತ ಚೆಕ್ಕನ್ನು ನಗದೀಕರಣಕ್ಕಾಗಿ ಅವರು ತಮ್ಮ ಖಾತೆಯಿರುವ ಕರ್ನಾಟಕ ಬ್ಯಾಂಕ್ ಲಿ, ಗೋಕಾಕ ಶಾಖೆ, ಇಲ್ಲಿಗೆ ಹಾಜರುಪಡಿಸಿದಾಗ, "ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ' ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 30-11-2022 ರಂದು ಸದರಿ ಚೆಕ್ ಅಮಾನ್ಯಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ 5. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದ ಚೆಕ್ ಅಮಾನ್ಯಗೊಂಡ ಬಗ್ಗೆ ಈ ಸಾಕ್ಷಿದಾರರು ತಮ್ಮ ವಕೀಲರ ಮುಖಾಂತರ ದಿನಾಂಕ 09-12-2022 ರಂದು ತಿಳುವಳಿಕೆ ಪತ್ರವನ್ನು ನೋಂದಾಯಿತ ಅಂಚೆ ಮೂಲಕ ಆರೋಪಿಯಾದ ನಿಮಗೆ ಕಳುಹಿಸಿದ್ದರು, ನಂತರ ಸದರಿ ನೋಟಿಸು ದಿನಾಂಕ 12-12-2022 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 6. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದಂತ ಚೆಕ್ಕು ನಿ.ಪಿ.1, ಅದರಲ್ಲಿರುವ ಸಹಿಯನ್ನು ನಿಪಿ.1(ಎ), ಬ್ಯಾಂಕ್‌ನವರು ನೀಡಿದಂತಹ ಮೆಮಾ/ಹಿಂಬರಹವನ್ನು ನಿಪಿ.2, ವಕೀಲರ ಮೂಲಕ ಆರೋಪಿಗೆ ನೀಡಿದ ಲೀಗಲ್ ನೋಟಿಸನ್ನು ನಿಪಿ.3, ಅಂಚೆ ರಶೀದಿಯನ್ನು ನಿಪಿ.4, ಅಂಚೆ ತಲುಪೋಪ್ಪಿಗೆ ಪತ್ರವನ್ನು ನಿಪಿ.5 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 7. ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

ಉತ್ತರಃ

ಪ್ರಶ್ನೆ 8. ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದೆಯಾ?

ಉತ್ತರಃ

(ದಿಃ 15-09-2023 ರಂದು ಮೇಲಿನ ಹೇಳಿಕೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ನಂತರ ಆರೋಪಿ ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಡೀಕರಿಸುತ್ತೇನೆ.)

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**